ಆಗುತ್ತಿಲ್ಲವೆಂದು ಅರಿತ ಮಹೇಶ ವಿನಾಯಕನತ್ತ ತಿರುಗಿ, 'ವಿನೂ, ಅವಳ ನೋವನ್ನು ನೋಡಲಾಗುತ್ತಿಲ್ಲ ನನಗೆ. ಇಂತಹ ನೋವಿನ ಮುಖವನ್ನು ನಾನು ಎಂದೂ ನೋಡಿಲ್ಲ. ಪ್ಲೀಜ್... ಡೂ ಸಮ್‌ಥಿಂಗ್ ಇಮ್ಮಿಡಿಯಟಲಿ. ಆ ನೋವಿನಿಂದ ಅವಳನ್ನು ಮೊದಲು ಪಾರು ಮಾಡು'.

'ಆಂಜಿಯೊಗ್ರಫಿ ಮಾಡಿದ ನಂತರ ಆಂಜಿಯೊಪ್ಲಾಸ್ಟಿ ಒಂದೇ ದಾರಿ ಅದಕ್ಕೆ. ಆದರೆ, ಅದರ ನಂತರದ ರಿಪರ್‌ಕಷನ್ಸ್ ಬಗ್ಗೆ ವರಿ ಆಗ್ತಾ ಇದೆ ನನಗೆ'.

'ಈಗ ಬೇರೆ ಕಡೆ ಕರೆದುಕೊಂಡು ಹೋಗುವ ಚಾನ್ಸ್ ಇದೆಯಾ ವಿನೂ...? ಬಾಂಬೆ, ಡೆಲ್ಲಿ ಇಲ್ಲಾ ಬೆಂಗಳೂರು ಎಲ್ಲಿಗಾದರೂ ಹೋಗ್ಪೋಣಂತೆ. ನೀನು ಅಲ್ಲಿಯ ಡಾಕ್ಟರ್ ಜೊತೆ ಮಾತಾಡು'.

'ಈಗಾಗಲೇ ನನ್ನ ಸ್ನೇಹಿತ ಡಾಕ್ಟರ್ ಜೊತೆ ಮಾತನಾಡಿದ್ದೇನೆ. ಸೀನಿಯರ್ ಎಕ್ಸ್‌ಪರ್ಟ್ಸ್ ಜೊತೆಗೂ ಮಾತಾಡಿದ್ದೇನೆ. ಅಲ್ಲಿಗೆ ಕರೆದುಕೊಂಡು ಹೋಗುವುದು ತುಂಬಾ ಸಮಯ ಆಗುವುದಲ್ಲದೆ ಪೂಜಾ ಈಗಿರುವ ಪರಿಸ್ಥಿತಿಯಲ್ಲಿ ಅದೂ ಕೂಡಾ ರಿಸ್ಕ್ ಅನ್ನುವುದು ಅವರ ಒಪೀನಿಯನ್'.

'ಹಾಗಿದ್ದರೆ ಮತ್ತೆ ಬೇರೆ ವಿಚಾರ ಯಾಕೆ. ಇಲ್ಲಿಯೇ ಆಂಜಿಯೊಗ್ರಫಿ, ಆಂಜಿಯೊಪ್ಲಾಸ್ಟಿ ಮಾಡಿಬಿಡು. ಅದೇನು ಡಾಕ್ಯುಮೆಂಟ್ಸ್ ಪ್ರೊಸೀಜರ್ ಎಲ್ಲ ರೆಡಿ ಮಾಡು' ಎಂದು ದುಃಖದಲ್ಲಿಯೇ ಒಂದು ನಿರ್ಧಾರದಲ್ಲಿ ಹೇಳಿದನು.

'ಸರಿ, ಹಾಗೇ ಆಗಲಿ' ಎನ್ನುತ್ತಾ ವಿನಾಯಕ ಮೇಲೆದ್ದು ಆಂಜಿಯೊಗ್ರಫಿಗಾಗಿ ಸಿದ್ಧಪಡಿಸುವಂತೆ ತನ್ನೆಲ್ಲ ಸಿಬ್ಬಂದಿಗೆ ಹೇಳಿ ತಾನೂ ಸಿದ್ಧನಾಗಿ ಬರಲು ಹೊರಟನು.

### ಮುಂಜಾನೆ 9 ಗಂಟೆ

ವಿನಾಯಕ ಮರಳಿ ಬಂದಾಗ ಅದಾಗಲೇ ಆತನ ಸಿಬ್ಬಂದಿಯು ಪೂಜಾಳನ್ನು ವಾರ್ಡಿನಿಂದ ಆಂಜಿಯೊಗ್ರಫಿ ಅಲ್ಲದೆ ಮುಂದಿನ ಚಿಕಿತ್ಸೆಗಾಗಿ ಗೌನ್‌ನೊಂದಿಗೆ ಸಿದ್ಧಪಡಿಸಿ ಮಲಗಿಸಿದ್ದರು. ಅಲ್ಲಿಗೆ ಬಂದ ವಿನಾಯಕ ಆಂಜಿಯೊಗ್ರಫಿ ಮಾಡಿ, ನಂತರ ಆತ ಅಲ್ಲಿಂದ ಹೊರಗೆ ಬಂದು ಮಹೇಶನನ್ನು ಕರೆದು, ಎಕ್ಸರೇ ಮಾನಿಟರ್ ಮುಂದೆ ಕುಳ್ಳಿರಿಸಿ ಕರೊನರಿ ಆಂಜಿಯೊಗ್ರಫಿಯ ರಿಸಲ್ಟ್ ವಿವರಿಸತೊಡಗಿದನು.

'ಮಹೀ, ನಾನು ಅಂದುಕೊಂಡಕ್ಕಿಂತ ಹೆಚ್ಚಿನ ಬ್ಲಾಕೇಜ್ ಇದೆ. ನೋಡಿಲ್ಲಿ, ರೈಟ್ ಕರೊನರಿ ಆರ್ಟರಿ ಜೊತೆಗೆ ಲೆಫ್ಟ್ ಕರೊನರಿ ಆರ್ಟರೀಸ್ ಬ್ಲಾಕೇಜ್‌ಗಳು ಆಂಜಿಯೊಗ್ರಾಮ್‌ನಲ್ಲಿ ಡಯಗ್ನೈಸ್ ಆಗಿದೆ. ರೈಟ್ ಕರೊನರಿ ಆರ್ಟರಿ ಸುಮಾರು ಎಂಬತ್ತರಷ್ಟು ಬ್ಲಾಕೇಜ್ ಆಗಿದ್ರೆ, ಲೆಫ್ಟ್ ಆರ್ಟರೀಸ್ ಕೂಡ ಫಿಫ್ಟಿ ಟೂ ಸಿಕ್ಸ್ಟಿ ಬ್ಲಾಕೇಜ್ ಆಗಿವೆ. ಇಷ್ಟೆಲ್ಲಾ ಇದ್ರೂ ಪೂಜಾ ಅದ್ಹೇಗೆ ಸಹಿಸಿದ್ದಾಳೋ ಆ ದೇವರಿಗೆ ಗೊತ್ತು. ರಿಯಲಿ ಇಟ್ಸ್ ಮಿರಾಕಲ್! ಕೂಡಲೇ ಆಂಜಿಯೊಪ್ಲಾಸ್ಟಿ ಮಾಡಲೇಬೇಕು. ಪರಿಸ್ಥಿತಿ ಹೀಗಿರುವುದರಿಂದ ಪೋಸ್ಟ್ ಆಪರೇಷನ್ ಸಿಚುವೇಷನ್ ತುಂಬಾ ರಿಸ್ಕ್ ಅನಿಸ್ತಾ ಇದೆ. ಇಂಥ ಸಂದರ್ಭದಲ್ಲಿ ಬ್ಲಡ್ ಪ್ರೆಷರ್ ಏರುಪೇರು ಆಗುವ ಸಾಧ್ಯತೆ ಇದೆ. ಕೆಲವೊಮ್ಮೆ ರೀ ಅಟ್ಯಾಕ್ ಆಗಬಹುದು' ಎಂದು ಭಾವುಕನಾಗಿ ಹೇಳುತ್ತಾ, 'ಏನಮ್ಮಾ ಪೂಜಾ, ಎಂಥಾ ಸಂಕಷ್ಟಕ್ಕೆ ತಂದೆಯಮ್ಮ ನಿನ್ನ ಅಣ್ಣನನ್ನು... ಹೇಗಾದರೂ ಸರಿಯೇ ನಿನ್ನನ್ನು ಉಳಿಸಿಕೊಳ್ಳುವೆನಮ್ಮ ನಾನು...' ಎನ್ನುತ್ತ ಅವನ ಕಣ್ಣುಗಳು ಕಣ್ಣೀರಿನಿಂದ ತುಂಬಿ ತುಳುಕುತ್ತಿದ್ದವು.

ಮಹೇಶ 'ನನ್ನ ಪೂಜಾಳಿಗೆ ಏನೂ ಆಗಬಾರದು ವಿನೂ...' ಎನ್ನುತ್ತಾ ಅವನ ಕೈಯನ್ನು ಹಿಡಿದುಕೊಂಡು ನಿಂತಾಗ, ಆಯಿತು ಎನ್ನುವಂತೆ ಕತ್ತು ಅಲ್ಲಾಡಿಸಿ 'ಮಹೀ, ಇಟ್ಸ್ ಗೆಟಿಂಗ್ ಲೇಟ್. ಲೆಟ್ ಮೀ ಗೋ ಟು ಆಪರೇಷನ್ ಥಿಯೇಟರ್...' ಎಂದು ಅಲ್ಲಿಂದ ಆಪರೇಷನ್ ಥಿಯೇಟರ್‌ನತ್ತ ಧಾವಿಸಿದನು.

ವಿನಾಯಕ ಆಪರೇಷನ್ ಥಿಯೇಟರಿನತ್ತ ಹೋದ ನಂತರ ಮಹೇಶ ತನ್ನ ತಾಯಿ, ಮಾವ ಕುಳಿತಿದ್ದ ವಿನಾಯಕನ ಚೇಂಬರಿಗೆ ಬಂದು ಕುಳಿತನು. ಗಿರಿಜಮ್ಮ ಕಣ್ಣೀರು ಹಾಕುತ್ತಲೇ



ಇದ್ದಳು. ಅದನ್ನು ಕಂಡ ಮಹೇಶ, 'ನೋಡಮ್ಮ, ಪೂಜಾಳಿಗೆ ಏನೂ ಆಗುವುದಿಲ್ಲ' ಎಂದು ಸಮಾಧಾನಿಸಿದರೂ ಗಿರಿಜಮ್ಮ ಅಳುವುದನ್ನು ನಿಲ್ಲಿಸಲಿಲ್ಲ. ಅವಳನ್ನು ಪಕ್ಕದಲ್ಲಿ ಕೂಡಿಸಿಕೊಂಡು ಧೈರ್ಯ ಹೇಳಿದಾಗ ಅವಳು ಅಳುವುದನ್ನು ನಿಲ್ಲಿಸಿ ಕುಳಿತಳು. ಅವಳನ್ನೇನೋ ಸಮಾಧಾನ ಮಾಡಿದ ಮಹೇಶ ಒಳಗೊಳಗೆ ದುಃಖದ ನೋವಿನಲ್ಲಿಯೇ ಇದ್ದ. ಇದೆಲ್ಲಾ ಹೇಗಾಯಿತು ಎಂದು ಮನಸ್ಸಿನಲ್ಲಿ ಆಲೋಚಿಸುತ್ತ ಹಿಂದಿನ ದಿನಗಳ ನೆನಪಿನತ್ತ ಜಾರಿದನು.

ಮಹೇಶ, ಶಿವಪ್ಪ ಹಾಗೂ ಗಿರಿಜಮ್ಮರ ಒಬ್ಬನೆ ಮಗ. ಬಿಎಸ್ಸಿ ಮುಗಿಸಿ ತನಗೆ ಆಸಕ್ತಿ ಇದ್ದಂತಹ ಎಲ್.ಎಲ್.ಬಿ. ಮುಕ್ತಾಯಗೊಳಿಸಿದ್ದ. ಪ್ರತಿಭಾವಂತನಾದ ಆತ ಎಲ್.ಎಲ್.ಬಿ.ಯಲ್ಲಿ ರ‍್ಯಾಂಕ್ ಸಹಿತ ಉತ್ತೀರ್ಣನಾದ ನಂತರ, ಸೀನಿಯರ್ ಅಡ್ವೊಕೇಟ್ ಹತ್ತಿರ ಪ್ರಾಕ್ಟೀಸ್ ಶುರು ಮಾಡಿದ. ಎರಡು ಮೂರು ವರ್ಷಗಳ ನಂತರ ತಾನೇ ಸ್ವತಂತ್ರವಾಗಿ ವಕೀಲ ವೃತ್ತಿಯನ್ನು ಪ್ರಾರಂಭಿಸಿದನು. ತನ್ನ ಪ್ರತಿಭೆಯ ಮೂಲಕ ಕೆಲವೇ ವರ್ಷಗಳಲ್ಲಿ ಕ್ರಿಮಿನಲ್ ಪ್ರಕರಣಗಳಲ್ಲಿ ಹೆಸರು ಮಾಡಿದನು. ಕ್ರಿಮಿನಲ್ ಕೇಸ್‌ಗಳನ್ನು ಲೀಲಾಜಾಲವಾಗಿ ಗೆಲ್ಲುವುದು ಅವನಿಗೆ ರೂಢಿಯಾಯಿತು. ಆಗಾಗ ಸಿವಿಲ್ ಪ್ರಕರಣಗಳನ್ನು ತೆಗೆದುಕೊಂಡು ಅವುಗಳಿಗಾಗಿ ಹೈಕೋರ್ಟ್‌ಗೂ ಹೋಗಿ ಬರಬೇಕಾಗುತ್ತಿತ್ತು. ಇದರಿಂದ ಆತನಿಗೆ ಸುತ್ತಮುತ್ತಲಿನ ಜಿಲ್ಲೆಗಳಲ್ಲಿ ಇನ್ನಷ್ಟು ಹೆಸರು ಬರಲು ಕಾರಣವಾಯಿತು. ಕ್ರಿಮಿನಲ್ ಪ್ರಕರಣಗಳನ್ನು ತೆಗೆದುಕೊಳ್ಳುತ್ತಿದ್ದರೂ ಮೂಲತಃ ಆದರ್ಶ ವಿಚಾರಗಳನ್ನು ಮೈಗೂಡಿಸಿಕೊಂಡು ಬಂದಿದ್ದ ಆತ ಅನವಶ್ಯಕ ದುಡ್ಡಿನಾಸೆಗಾಗಿ ಕೊಲೆಗಾರನ ಪರವಾಗಿಯೋ ಅಥವಾ ಇನ್ಯಾವಾದರೂ ಅನ್ಯಾಯವೆಸಗಿದ ಪಕ್ಷಕಾರರ ಪರವಾಗಿ ವಾದ ಮಾಡುತ್ತಿರಲಿಲ್ಲ.

ಮಹೇಶ ಪಿ.ಯು.ಸಿ. ಮಾಡುವ ವೇಳೆ ಸಹಪಾಠಿಯಾಗಿದ್ದವನೇ ವಿನಾಯಕ. ಇಬ್ಬರೂ ಪ್ರತಿಭಾವಂತರಾದ್ದರಿಂದ ಇಬ್ಬರಲ್ಲೂ ಅಪರಿಮಿತ ಸ್ನೇಹ. ಮುಂದೆ ಪಿ.ಯು.ಸಿ. ಆದ ನಂತರ ಈತ ಬಿಎಸ್ಸಿ ಕಲಿಯಲು ಹೋದರೆ, ವಿನಾಯಕ ಎಂ.ಬಿ. ಬಿ.ಎಸ್.ಗೆ ಅಡ್ಮಿಷನ್ ಮಾಡಿಸಿದ್ದನು. ಇಬ್ಬರೂ ಒಂದೇ ನಗರದಲ್ಲಿದ್ದರಿಂದ ಪಿ.ಜಿ.ಯಲ್ಲಿಯೇ ಇರುತ್ತಿದ್ದರು. ಪದವಿ ತರುವಾಯ ಮಹೇಶ ಲಾ ಕಲಿಯಲು ಶುರು ಮಾಡಿದರೆ, ವಿನಾಯಕ ಕಾರ್ಡಿಯಾಲಜಿಯಲ್ಲಿ ಎಂ.ಎಸ್. ಮಾಡಿ ನಗರದಲ್ಲಿ ಪ್ರಸಿದ್ಧ ಕಾರ್ಡಿಯಾಲಾಜಿಸ್ಟ್ ಎಂದು ಹೆಸರು ಪಡೆದನು. ಮಹೇಶ ಲಾ ಓದುವಾಗ ಪರಿಚಯವಾದವಳು ಪೂಜಾ. ವಿನಾಯಕನ ದೊಡ್ಡಪ್ಪನ ಮಗಳು. ವಿನಾಯಕನಿಗೂ ಸ್ವಂತ ಅಕ್ಕ ತಂಗಿ ಇಲ್ಲದ್ದರಿಂದ ಇವಳ ಮೇಲೆ ವಿಪರೀತ ಪ್ರೀತಿ. ಊರಲ್ಲಿ ಇವರಿಬ್ಬರ ಮನೆಗಳು ಅಕ್ಕಪಕ್ಕದಲ್ಲಿಯೇ ಇದ್ದವು. ಪೂಜಾ ಯಾವತ್ತೂ ವಿನಾಯಕನ ಮನೆಯಲ್ಲಿ ಇರುತ್ತಿದ್ದಳು. ಜೊತೆಗೆ ವಿನಾಯಕನ ತಂದೆ ತಾಯಿಯು ತಮಗೆ ಹೆಣ್ಣುಮಕ್ಕಳು ಇರದ ಕೊರತೆಯನ್ನು ಪೂಜಾಳ

